ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಜಗಳೂರು

ಸಿ ಸಿ ನಂಃ 258/17

| | | |
|---|---|---|
| ಸಾಕ್ಷಿದಾರರ ಹೆಸರು | ಸುದೀಪ್ | ಚಾಸಾ - 1 |
| ತಂದೆ / ಗಂಡನ ಹೆಸರು | ವಾಮದೇವಪ್ಪ | ಫ್ರಾ ಸ - 1 |
| ವಯಸ್ಸು | 35 ವರ್ಷ | ಪ್ರಮಾಣ ವಚನ ಭೋದಿಸಿದ ದಿನಾಂಕಃ 24-10-2019 |
| ವೃತ್ತಿ | ವ್ಯಾಪಾರ | |
| ವಾಸ | ಓಂಕಾರೇಶ್ವರ ಬಡಾವಣೆ, ಜಗಳೂರು | |

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ - ಮಾನ್ಯ ಸ ಸ ಅ ರವರಿಂದ

ಚಾಸಾ-2 ರಿಂದ 4 ಮತ್ತು 9 ರಿಂದ 14 ರವರು ಗೊತ್ತು. ಆರೋಪಿತರು ನನಗೆ ಗೊತ್ತಿಲ್ಲ. ಈಗ್ಗೆ 2016 ರಲ್ಲಿ ದಾವಣಗೆರೆಗೆ ನಾನು, ಚಾಸಾ-12 ರವರು ಮದ್ಯಾಹ್ನ ಸಮಯದಲ್ಲಿ ಹೋಗಿದ್ದಾಗ ಮರುದಿನ ಬೆಳಿಗ್ಗೆ ನಮ್ಮ ಮನೆಗೆ ವಾಪಾಸ್ಸು ಬಂದಾಗ ನಮ್ಮ ಮನೆಯಲ್ಲಿ ಕಳ್ಳತನ ಆಗಿರುವ ಬಗ್ಗೆ ಗೊತ್ತಾಯಿತು. ನಮ್ಮ ಮನೆಯ ಬಾಗಿಲ ಬೀಗ ಮುರಿದು ಬಾಗಿಲು ತೆರೆದು ಒಳಗೆ ಹೋಗಿದ್ದು, ನಮ್ಮ ಮನೆಯ ಕೋಣೆಯಲ್ಲಿ ಗಾಡ್ರೇಜ್ ಬೀರುವನ್ನು ಮುರಿದು ಅದರಲ್ಲಿದ್ದ ಎರಡು ಬೆಳ್ಳಿ ದೀಪ, ಒಂದು ಗಣೇಶನ ವಿಗ್ರಹ ಮತ್ತು 4 ಸಾವಿರ ನಗದು ಹಣ ಕಳ್ಳತನ ಆಗಿತ್ತು. ಈ ಬಗ್ಗೆ ನಾನು ಪೊಲೀಸರಿಗೆ ದೂರು ನೀಡಿರುತ್ತೇನೆ. ಸಾಕ್ಷಿಯು ತಾನು ನೀಡಿದ ದೂರು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸಿದ್ದು, ಅದನ್ನು ನಿಪಿ-1 ಮತ್ತು ನಿಪಿ-1(ಎ) ಎಂದು ಗುರುತಿಸಲಾಯಿತು. ಅದೇ ದಿನ ಮದ್ಯಾಹ್ನ 2 ಗಂಟೆ ಸಮಯಕ್ಕೆ ಪೊಲೀಸರು ಮನೆಗೆ ಬಂದು ನಾನು ತೋರಿಸಿದ ಜಾಗದಲ್ಲಿ ಸ್ಥಳ ಪರಿಶೀಲನೆ ಮಾಡಿ, ನನ್ನ ಮತ್ತು ಚಾಸಾ-11 ಮತ್ತು 12 ರವರ ಸಮಕ್ಷಮ ಮಹಜರ್ ಕ್ರಮ ಜರುಗಿಸಿರುತ್ತಾರೆ ಸಾಕ್ಷಿಯು ಸದರಿ ಸ್ಥ,ಳದಲ್ಲಿ ನಡೆಸಿದ ಮಹಜರ್ ದಾಖಲೆ ಮತ್ತು ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸಿದ್ದು, ಅವುಗಳನ್ನು ನಿಪಿ-2 ಮತ್ತು ನಿಪಿ-2(ಎ) ಎಂದು ಗುರುತಿಸಲಾಯಿತು. ನಂತರ ಒಂದು ತಿಂಗಳ ನಂತರ ಪೊಲೀಸರು ನಮಗೆ ದೂರವಾಣಿ ಮೂಲಕ ನಮ್ಮ ಕಳುವಾದ ವಸ್ತುಗಳು ಸಿಕ್ಕಿರುವ ಬಗ್ಗೆ ತಿಳಿಸಿದರು. ಆಗ ನಾನು ಠಾಣೆಗೆ ಹೋಗಿ ಕಳುವಾದ ನಮ್ಮ ಬೆಳ್ಳಿಯ ವಸ್ತುಗಳನ್ನು ಗುರುತಿಸಿ ಠಾಣೆಯಲ್ಲಿಯೇ ಮಹಜರ್ ಕ್ರಮ ಜರುಗಿಸಿರುತ್ತಾರೆ ನಂತರ ಸದರಿ ಬೆಳ್ಳಿ ವಸ್ತುಗಳನ್ನು ನಾನು ನ್ಯಾಯಾಲಯದಿಂದ ಮಧ್ಯಂತರ ಆದೇಶ ಪಡೆದು ಬಿಡಿಸಿಕೊಂಡಿರುತ್ತೇನೆ. ಸಾಕ್ಷಿಯು ತಾನು ಆ ದಿನ ಗುರುತಿಸಿದ ಮತ್ತು ತನ್ನ ಮನೆಯಿಂದ ಕಳುವಾದ ಛಾಯಾಚಿತ್ರದಲ್ಲಿರುವ ಸದರಿ ಎರಡು ಬೆಳ್ಳಿ ದೀಪಗಳನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ಗುರುತಿಸಿದ ಸದರಿ ಛಾಯಾಚಿತ್ರಗಳನ್ನು ನಿಪಿ-3 ಮತ್ತು 4 ಎಂದು ಗುರುತಿಸಲಾಯಿತು. ಪೊಲೀಸರು ನನ್ನಿಂದ ಯಾವುದೇ ಹೇಳಿಕೆಯನ್ನು ಪಡೆದಿರುವುದಿಲ್ಲ. ನಾನು ದೂರು ನೀಡಿದಂತೆ ನಮ್ಮ ಮನೆಯಿಂದ ಕಳ್ಳತನವಾದ ಬೆಳ್ಳಿಯ ಗಣೇಶನ ವಿಗ್ರಹ ಮತ್ತು 4 ಸಾವಿರ ನಗದು ಹಣ ಸಿಕ್ಕಿರುವುದಿಲ್ಲ ಎಂದು ಪೊಲೀಸರು ಹೇಳಿರುತ್ತಾರೆ.

(ಮಾನ್ಯ ಸಾಹಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ

ಸದರಿ ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಸೂಕ್ತ ಕಾರಣಗಳನ್ನು ನೀಡಿದ ಮೇರೆಗೆ ಪಾಟೀ ಸವಾಲಿಗೆ ಅವಕಾಶ ನೀಡಲಾಯಿತು).

ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರಿಂದ

ದಿಃ 03-09-2016 ರಂದು ಪೊಲೀಸ್ ಠಾಣೆಗೆ ಹೋಗಿ ಗಣಪತಿಯ ಬೆಳ್ಳಿಯ ವಿಗ್ರಹ ಮನೆಯಲ್ಲಿಯೇ ಬಿದ್ದಿತ್ತು ಎಂದು ಪೊಲೀಸರ ಮುಂದೆಯೇ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ. ಅದೇ ದಿನ ನ್ಯಾಯಾಲಯದಲ್ಲಿ ಹಾಜರು ಇರುವ 4 ಜನ ಆರೋಪಿತರ ಭಾವಚಿತ್ರ ತೋರಿಸಿ ಇವರೇ ಆ ದಿನ ಕಳ್ಳತನ ಮಾಡಿದ ವ್ಯಕ್ತಿಗಳು ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ. ಅದೇ ರೀತಿ ಸದರಿ ಆರೋಪಿತರನ್ನು ಮತ್ತೆ ನೋಡಿದರೆ ಗುರುತಿಸುತ್ತೇನೆ ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಶ್ರೀ ನ್ಯಾಯವಾದಿಗಳಿಂದಃ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿರುತ್ತಾರೆ.)

ಓ ಹೇ ಕೇ ಸರಿ ಇದೆ

ಪ್ರ.ದ.ನ್ಯಾ.ದಂ., ಜಗಳೂರು